**೪ (೧) (ಬಿ) (viii): ಸಲಹೆಗಳನ್ನು ಪಡೆಯಲು ಎರಡು ಮತ್ತು ಅದಕ್ಕಿಂತ ಹೆಚ್ಚಾಗಿ ಸದಸ್ಯರಿರುವ ಬೋರ್ಡಗಳು, ಕೌನ್ಸಿಲಗಳು, ಸಮಿತಿಗಳು ಹಾಗೂ ಇತರೆ ಸಂಸ್ಥೆಯ ನಡುವಳಿಗಳು ಸಾರ್ವಜನಿಕರಿಗೆ ಮುಕ್ತವಾಗಿ ದೊರೆಯುತ್ತವೆಯೆ ? ಪ್ರಾಧಿಕಾರಗಳು:-**

ಈ ಕೆಳಕಂಡವು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳಾಗಿರುತ್ತವೆ,

(ಎ) ಸಿಂಡಿಕೇಟ್;
(ಬಿ) ವಿದ್ಯಾವಿಷಯಕ ಪರಿಷತ್ತು ;
(ಸಿ) ಹಣಕಾಸು ಸಮಿತಿ;
(ಡಿ) ಅಧ್ಯಯನಗಳ ಮಂಡಳಿ;
(ಇ) ವ್ಯಾಸಂಗ ವಿಭಾಗಗಳು;
(ಎಫ್) ಯೋಜನಾ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ;
(ಜಿ) ಉಪ ಸಮಿತಿಗಳು

೧. ಪರಿನಿಯಮಗಳ ಸಮಿತಿ
೨. ವಿನಿಯಮಗಳ ಸಮಿತಿ
೩. ಪ್ರಸಾರಾಂಗ ಸಮಿತಿ
೪. ಕಟ್ಟಡ ಸಮಿತಿ
೫. ಪರಿಶಿಷ್ಟಜಾತಿ ಪರಿಶಷ್ಟ ಪಂಗಡಗಳ ಸ್ಥಾಯಿ ಸಮಿತಿ
೬. ದುರ್ನಡತೆ ವಿಚಾರಣೆ ಸಮಿತಿ

ವಿದ್ಯಾವಿಷಯಕ ಪರಿಷತ್ತಿನ ಸಭೆಯ ನಡುವಳಿಗಳನ್ನು ವೀಕ್ಷಿಸಲು ಪತ್ರಿಕೆ ಮತ್ತು ಮಾಧ್ಯಮದವರಿಗೆ ಆಹ್ವಾನಿಸಲಾಗುತ್ತದೆ.

**ಸಿಂಡಿಕೇಟ ಸದಸ್ಯರುಗಳ ಪಟ್ಟಿ**

| ಕ್ರಮ.ಸಂಖ್ಯೆ | ಅಧಿಕಾರಿಗಳ ಹೆಸರು | |
|---|---|---|
| ೧ | ಪ್ರೊ!! ಈ.ಟಿ.ಪುಟ್ಟಯ್ಯ<br>ಕುಲಪತಿಗಳು<br>ಗುಲಬರ್ಗಾ ವಿಶ್ವವಿದ್ಯಾಲಯ,<br>ಗುಲಬರ್ಗಾ | ಚೇರಮನ್ |
| ೨ | ಆಯುಕ್ತರು<br>ಕಾಲೇಜುಗಳ ಶಿಕ್ಷಣ ಶೇಷಾದ್ರಿ<br>ರಸ್ತೆ ಬೆಂಗಳೂರು | ಸದಸ್ಯರು |

| | | |
|---|---|---|
| ೩ | ನಿರ್ದೇಶಕರು<br>ತಾಂತ್ರಿಕ ಶಿಕ್ಷಣ ಶೇಷಾದರಿ ರಸ್ತೆ ಬೆಂಗಳೂರು:– | ಸದಸ್ಯರು |
| ೪ | | |
| ೫ | ಶ್ರೀ ಸಾವಳಗಿ ಶಾಂತಲಿಂಗ್<br>"ಸಾಯಿ ನಿವಾಸ" ಶಿವನಗರ<br>ಮ.ನಂ.೧೯–೦೬–೨೧೫.<br>ಬೀದರ | ಸದಸ್ಯರು |
| ೬ | ಶ್ರೀ ಸುಭಾಷ ರಾಠೋಡ<br>ಮ.ನಂ.೬೩. ಡಾ!! ಅವಿನಾಶ ಶಾಹಾ ಆಸ್ಪತ್ರೆ ಹಿಂದುಗಡೆ ಜಯನಗರ ಸೇಡಂ ರಸ್ತೆ ಗುಲಬರ್ಗಾ | ಸದಸ್ಯರು |
| ೭ | ಶ್ರೀ ಜಗದೀಶ ಡಿ.ಎಚ್<br>ಪ್ರಾಚಾರ್ಯರು ನಂದಿನಿ ಬಿ.ಇಡ್.ಕಾಲೇಜ ರಾಮಪುರ ಹಳ್ಳಿ ರಾಯಚೂರ | ಸದಸ್ಯರು |
| ೮ | ಶ್ರೀ ವಿ.ನಸೀಮ<br>ಪ್ರಾಚಾರ್ಯರು ಅಲ್ ಬದರ ಬಿ.ಇಡ್ ಕಾಲೇಜ ಗುಲಬರ್ಗಾ | ಸದಸ್ಯರು |
| ೯ | ಶ್ರೀ ಶರಣಪ್ಪಾ ಸಿ<br>ಪ್ರಾಚಾರ್ಯರು<br>ವಿ.ಸಿ.ಖ.ಮಹವಿದ್ಯಾಲಯ<br>ಲಿಂಗಸೂಗುರು. ಜಿಲ್ಲಾ.<br>ರಾಯಚೂರ. | ಸದಸ್ಯರು |

| | | |
|---|---|---|
| ೧೦ | ಶ್ರೀ ಎಂ.ಬಿ.ನಿಗ್ಗುಡಗಿ ಪ್ರಾಚಾರ್ಯರು ಎಸ.ಬಿ.ಕಲಾ ಮಹಾವಿದ್ಯಾಲಯ ಗುಲಬರ್ಗಾ | ಸದಸ್ಯರು |
| ೧೧ | ಶ್ರೀ ರಾಘವೇಂದ್ರ ದತ್ತಾತ್ರೆಯರಾವ ಕುಲಕರ್ಣಿ ನ್ಯಾಯವಾದಿಗಳು "ರಾಘವೇಂದ್ರ ಕೃಪ" ಪ್ಲಾಟ ನಂ.೪೫.ಮೋರೆ ಕಾಂಪಲೇಕ್ಸ ಹತ್ತಿರ ಗುಲಬರ್ಗಾ. | ಸದಸ್ಯರು |
| ೧೨ | ಪ್ರೊ. ಆರ್.ಬಿ.ಮಾಲಿಕೂಡಲಗಿ ಮನೆ.ನಂ.೧೦-೯೧೯/೧ ಭವಾನಿ ರಸ್ತೆ ಬ್ರಹ್ಮಪುರ ಶರಣ ನಗರ ಗುಲಬರ್ಗಾ-೫೮೫೧೦೩ | ಸದಸ್ಯರು |
| ೧೩ | ಶ್ರೀ ಬಾಬುಲಾಲ ಜಿ.ಜೈನ. ಅರಿಹಂತ ಕಾಂಪ್ಲೆಕ್ಸ ಹಂಪಿ ರಸ್ತೆ ಗುಲಬರ್ಗಾ. | ಸದಸ್ಯರು |
| ೧೪ | ಶ್ರೀ ಮಹಾರುದ್ರ ಹೂಗಾರ "ಲಕ್ಷ್ಮೀ ನಿವಾಸ" ನಂ.೯-೯-೩೬೮ ಬ್ರಹ್ಮಪುರ ಕಾಲೋನಿ ಬಿ.ವಿ.ಬಿ.ಕಾಲೇಜ ರಸ್ತೆ ಬೀದರ. | ಸದಸ್ಯರು |
| ೧೫ | ಶ್ರೀಮತಿ ಉಷಾ ಶರ್ಮಾ ಪಾಟೀಲ "ನಂದಾದೀಪ" ನಂ.೬೫ ವಿಶವೇಶ್ವರಯ್ಯ ನಗರ ಸೇಡಂ ರೋಡ ಗುಲಬರ್ಗಾ-೫೮೫೧೦೬. | ಸದಸ್ಯರು |
| ೧೬ | ಶ್ರೀ ಎಸ.ಜಿ.ಭಾರತಿ. ಎಲ್.ಪಿ.ಜಿ.-೯.ಕೆ.ಬಿ.ಬಿ.ಕಾಲೋನಿ ಕೋಟನೂರ ರಸ್ತೆ ಗುಲಬರ್ಗಾ | ಸದಸ್ಯರು |

| | | |
|---|---|---|
| ೧೭ | ಪ್ರೊ.!! ಜಿ.ಆರ್.ನಾಯಕ.<br>ಜೀವ ರಸಾಯನ ಶಾಸ್ತ್ರ<br>ಅಧ್ಯಾಯನ ವಿಭಾಗ.<br>ಗುಲಬರ್ಗಾ ವಿಶ್ವವಿದ್ಯಾಲಯ<br>ಗುಲಬರ್ಗಾ. | ಸದಸ್ಯರು |
| ೧೮ | ನಿರ್ದೇಶಕರು<br>ವೈದ್ಯಕಿಯ ಶಿಕ್ಷಣ ಇಲಾಖೆ<br>ಕೆ.ಆರ್.ವೃತ ಬೆಂಗಳೂರು. | ಸದಸ್ಯರು |
| ೧೯ | ಆಯುಕ್ತರು.<br>ಸಾರ್ವಜನಿಕ ಶಿಕ್ಷಣ ಇಲಾಖೆ<br>ಕೆ.ಆರ್.ವೃತ ಬೆಂಗಳೂರು. | ಸದಸ್ಯರು |
| ೨೦ | ನಿರ್ದೇಶಕರು<br>ಪದವಿ ಪೂರ್ವ ಶಿಕ್ಷಣ<br>ಇಲಾಖೆ ಮಲ್ಲೇಶ್ವರಂ ವೃತ<br>ಬೆಂಗಳೂರು | ಸದಸ್ಯರು |
| ೨೧ | ಕುಲಸಚಿವರು<br>(ಮೌಲ್ಯಮಾಪನ)<br>ಗುಲಬರ್ಗಾ ವಿಶ್ವವಿದ್ಯಾಲಯ,<br>ಗುಲಬರ್ಗಾ | ಸದಸ್ಯರು |
| ೨೨ | ಹಣಕಾಸು ಅಧಿಕಾರಿಗಳು<br>ಗುಲಬರ್ಗಾ ವಿಶ್ವವಿದ್ಯಾಲಯ,<br>ಗುಲಬರ್ಗಾ | ಖಾಯಂ ಆಮಂತ್ರಿತರು |
| ೨೩. | ಕುಲಸಚಿವರು<br>ಗುಲಬರ್ಗಾ ವಿಶ್ವವಿದ್ಯಾಲಯ,<br>ಗುಲಬರ್ಗಾ | ಸದಸ್ಯ/ಕಾರ್ಯದರ್ಶಿಗಳು. |

## ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು

| | | | | | |
|---|---|---|---|---|---|
| ೧ | ಕುಲಪತಿಗಳು<br>ಗುಲಬರ್ಗಾ ವಿಶ್ವವಿದ್ಯಾಲಯ,<br>ಗುಲಬರ್ಗಾ | ಚೇರಮನ್ | ೨ | ಆಯುಕ್ತರು,<br>ಕಾಲೇಜು ಶಿಕ್ಷಣ ಶೇಷಾದ್ರಿ ರಸ್ತೆ,<br>ಬೆಂಗಳುರು–೫೬೦೦೦೧. | ಸದಸ್ಯರು |
| ೩ | ನಿರ್ದೇಶಕರು,<br>ತಾಂತ್ರಿಕ ಶಿಕ್ಷಣ<br>ಪ್ಯಲೇಸ ರಸ್ತೆ,<br>ಬೆಂಗಳುರು–೫೬೦೦೦೧ | ಸದಸ್ಯರು | ೪ | ಶ್ರೀ ಸುನೀಲ ವಲ್ಲಾಪುರೆ, MLA<br>ನಂ.೧೭೧ ಶಾಂತಿ ನಗರ ಗುಲಬರ್ಗಾ | ಸದಸ್ಯರು |
| ೫ | ಶ್ರೀ ಇಶಣ್ಣಾ ಗುಲಗನ್ನವರ, MLA<br>ಪೊಸ್ಟ ಇಟಗಿ, ತಾಲುಕು:<br>ಯಲಬುರ್ಗಾ ಜಿಲ್ಲೆ ಕೊಪ್ಪಳ –<br>೫೮೩೨೩೨ | ಸದಸ್ಯರು | ೬ | ಶ್ರೀ.ಕೆ. ನೇಮರಾಜ ನಾಯಕ,<br>ಎಮ್.ಎಲ್.ಎ. ಮರಿಯಮ್ಮನಹಳ್ಳಿ<br>ತಾಂಡಾಸ ತಾ. ಹೊಸಪೇಟ, ಜಿಲ್ಲೆ<br>ಬಳ್ಳಾರಿ. | ಸದಸ್ಯರು |
| ೭ | ಶ್ರೀ. ರಾಜಶೇಖರ ಬಸವರಾಜ<br>ಪಾಟೀಲ್, ಎಮ್.ಎಲ್.ಎ.<br>ಕೆ.ಎಸ್.ಆರ್.ಟಿ.ಸಿ. ಬಸ್ಸಸ್ಟ್ಯಾಂಡ<br>ಹತ್ತರ, ಹುಮನಾಬಾದ, ಜಿಲ್ಲೆ<br>ಬೀದರ | ಸದಸ್ಯರು | ೮ | ಶ್ರೀ. ಸೈಯದ ಯಾಸಿನ,<br>ಎಮ್.ಎಲ್.ಎ. ನಂ.೪೦೧೯<br>ಎಚ್.ಎ.ಎಲ್.2ND, Stage 100 feet<br>Road, ಬೆಂಗಳೂರು ೫೬೦೦೨೧ | |
| ೯ | ಶ್ರೀ. ಮನೋಹರ ಮಸ್ಕಿ<br>ಎಮ್.ಎಲ್.ಸಿ. ಸಿಂಧನೂರ<br>ಮ.ನಂ.೩೪೮೪/ಎ ಗಡ್ಡಹಳ್ಳಿ<br>ಎರಡನೇ ಬ್ಲಾಕ 2nd stage<br>R.M.V. Layout, ಬೆಂಗಳೂರು–<br>೫೬೦೯೪ | ಸದಸ್ಯರು | ೧೦ | ಶ್ರೀ. ಖಾಜಿ ಆರ್ಷದ ಅಲಿ,<br>ಎಮ್.ಎಲ್.ಎ, No.8-11-<br>525/429 jyoti Colony, ಬೀದರ | |
| ೧೧ | ಶ್ರೀ. ಶಾಂತಪ್ಪ ಎಸ್. ಸೊಮಾ,<br>ಪ್ರಾಚಾರ್ಯರು, ಎಸ್.ಬಿ. ಕಾಲೇಜು<br>ಆಫ ಎಜ್ಯುಕೇಶನ, ಗುಲಬರ್ಗಾ | ಸದಸ್ಯರು | ೧೨ | ಶ್ರೀ. ಎಮ್.ಬಿ. ನಿಗ್ಗುಡಿಗಿ, ಪ್ರನ್ಸಿಪಾಲ,<br>ಎಸ್.ಬಿ. ಆರ್ಟ್ಸ ಕಾಲೇಜು,<br>ಗುಲಬರ್ಗಾ | ಸದಸ್ಯರು |
| ೧೩ | ಶ್ರೀ. ಶೇಖಪ್ಪ ಬಿ. ರಾಯಖ,<br>ಪ್ರಿನ್ಸಪಾಲ, ಜವಾಹರ ಕಾಲೇಜು,<br>ಯಾದಗಿರ | ಸದಸ್ಯರು | ೧೪ | ಶ್ರೀ. ಶಿವರಾಜ ಎಮ.ದೇವಪ್ಪ,<br>ಪ್ರಿನ್ಸಿಪಾಲ, ಸರಕಾರಿ ಪ್ರಥಮ, ದರ್ಜೆ,<br>ಕಾಲೇಜು ಶಾಹಪುರ, ಜಿಲ್ಲೆ<br>ಯಾದಗಿರ. | ಸದಸ್ಯರು |
| ೧೫ | ಶ್ರೀ.ಹೆಚ್.ಕೆ. ಶಿವಮೂರ್ತಿಗೌಡ,<br>ಪ್ರಿನ್ಸಿಪಾಲ, ಸರಕಾರಿ<br>ಮಹಾವಿದ್ಯಾಲಯ ಕೂಡಲ್ಗಿ, ಜಿಲ್ಲೆ | ಸದಸ್ಯರು | ೧೬ | ಶ್ರೀಮತಿ. ಶ್ಯಾಮುಲ ವಿ. ದತ್ತಾ,<br>ಪ್ರಿನ್ಸಿಪಾಲ, ಗುರುನಾನಕ ಪ್ರಥಮ<br>ದರ್ಜೆ ವಿಜ್ಞಾನ ಮಹಾವಿದ್ಯಾಲಯ, | ಸದಸ್ಯರು |

| | | | | | |
|---|---|---|---|---|---|
| | ಬಳ್ಳಾರಿ. | | | ಬೀದರ | |
| ೧೭ | ಶ್ರೀ. ಎಸ್.ಎಸ್. ಹಿರೇಮಠ, ಪ್ರನ್ಸಿಪಾಲ, ಸರಕಾರಿ ಪ್ರಥಮ, ದರ್ಜೆ ಕಾಲೇಜು ಜೆವರ್ಗಿ, ಗುಲಬರ್ಗಾ. | ಸದಸ್ಯರು | ೧೮ | ಶ್ರೀಮತಿ. ಪೂರ್ಣಿಮಾ ಪಾಟೀಲ್, ಪ್ರಿನ್ಸಿಪಾಲ, ಎಮ್.ಎಮ್.ಕೆ. ಕಾಲೇಜ ಆಫ ವಿಜ್ಯುವಲ ಆರ್ಟ್ಸ, ಗುಲಬರ್ಗಾ. | ಸದಸ್ಯರು |
| ೧೯ | ಶ್ರೀ. ಸಾಹೆಬ ಆಲಿ, ಪ್ರಾಚಾರ್ಯರು, ಕೆ.ಸಿ.ಟಿ.ಬಿ. ಇಡ್.ಕಾಲೇಜು, ಗುಲಬರ್ಗಾ | ಸದಸ್ಯರು | ೨೦ | ಡಾ: ರುಬಿರು ಮಲ್ಲಪ್ಪ, ಪ್ರಾಚಾರ್ಯರು, ವಿಜಯ ವಿದ್ಯಾಲಯ ಮೆಥೂಡಿಸ್ಟ ಕಾಲೇಜು, ಗುಲಬರ್ಗಾ. | ಸದಸ್ಯರು |
| ೨೧ | ಡಾ: ವಾಯ.ಎಮ್.ಜಯರಾಜ, ಸೂಕ್ಷ್ಮ ಜೀವಶಾಸ್ತ್ರ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. | ಸದಸ್ಯರು | ೨೨ | ಡಾ: ಎಂ.ಎ. ಹಮ್ಮಿದ, ಡೀನ, ಆರ್ಟ್ಸ ನಕಾಯ, ಉರ್ದು ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. | ಸದಸ್ಯರು |
| ೨೩ | ಡಾ!! ಬಿ.ಎಮ,ಕನ್ನಹಳ್ಳಿ, ಢೀನ, ವಾಣಿಜ್ಯ ನಿಕಾಯ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. | ಸದಸ್ಯರು | ೨೪ | ಡಾ!! ಬಿ.ಎಸ.ಮಹೇಶ್ವರಪ್ಪ ಡೀನರು ಸಮಾಜ ಶಾಸ್ತ್ರ ನಿಕಾಯ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ | ಸದಸ್ಯರು |
| ೨೫ | ಡಾ!! ವಿ.ಪಿ.ರಾಠೊಡ ಗಣಿತ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ | ಸದಸ್ಯರು | ೨೬ | ಡಾ!! ಬಿ.ಎನ್.ನಿಂಬುರು, ಅರ್ಥಶಾಸ್ತ್ರ ವಿಭಾಗ , ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ | ಸದಸ್ಯರು |
| ೨೭ | ಡಾ.ಇ.ಆರ್.ಎಕಬೋಟೆ ಶಿಕ್ಷಣ ವಿಭಾಗ, ಸ್ನಾತಕೋತ್ತರ ಕೇಂದ್ರ, ರಾಯಚೂರ | ಸದಸ್ಯರು | ೨೮ | ಗ್ರಂಥಪಾಲಕರು ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ | ಸದಸ್ಯರು |
| ೨೯ | ನಿರ್ದೇಶಕರು ವಿದ್ಯಾರ್ಥಿ ಕಲ್ಯಾಣ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ | ಸದಸ್ಯರು | ೩೦ | ನಿರ್ದೇಶಕರು ಯೋಜನೆ ಮಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ | ಸದಸ್ಯರು |
| ೩೧ | ನಿರ್ದೇಶಕರು ಕಾಲೇಜು ಅಭಿವೃದ್ಧಿ ಮಢಳಿ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ | ಸದಸ್ಯರು | ೩೨ | ನಿರ್ದೇಶಕರು ದೈಹಿಕ ಶಿಕ್ಷಣ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ | ಸದಸ್ಯರು |
| ೩೩ | ಹಣಕಾಸು ಅಧಿಕಾರಿಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ | ಸದಸ್ಯರು | ೩೪ | ಕುಲಸಚಿವರು (ಮೌಲ್ಯಮಾಪನ), ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ | |
| ೩೫ | ಕುಲಸಚಿವರು, ಗುಲಬರ್ಗಾ | ಸದಸ್ಯರು ಕಾರ್ಯದರ್ಶಿ | ೩೬ | ಶ್ರೀ ಕೆ.ಚನ್ನಪ್ಪ | ಸದಸ್ಯರು |

| | | | | | |
|---|---|---|---|---|---|
| | ವಿಶ್ವವಿದ್ಯಾಲಯ, ಗುಲಬರ್ಗಾ | | | ಪಜಿತಾ ೩ನೇ ಕ್ರಾಸ ಯಾನರಡ್ಡಿ ಕಂಪಾಂಡ ಕಂಟೋನಮೆಂಟ, ಬಳ್ಳಾರಿ | |
| ೩೭ | ಶ್ರೀ ಫಾರುಕ ಅಬ್ಬಾ ಕಸಬ<br>ಕೇರ ಆಫ ಫಾರುಕ ಅನ್ವರ ಕಂಪನಿ, ರಾಯಚೂರ | ಸದಸ್ಯರು | ೩೮ | ಶ್ರೀ ಡಿ.ವಿ.ಸಿಂದೊಲ<br>ಶ್ರೀ ಬಾಲಾಜಿ ಇಂದಸ್ಟ್ರಿ ಕೆ.ಎಸ.ಎಸ.ಐ, ಡಿ.ಪಿ.ಇಂದಸ್ಟ್ರಿಯಲ ಎಸ್ಟೆಟ ಬೀದರ. | ಸದಸ್ಯರು |
| ೩೯ | ಶ್ರೀ ಸುನೀಲ ರಾಜ<br>ಮನೆ.ನಂ.೧೧-೧-೬೫/೧ ರಾಗಾ ನಿವಾಸ ಮಂಗಲ ಪೇಟ ಬೀದರ. | ಸದಸ್ಯರು | ೪೦ | ಶ್ರೀ ಸುನೀಲ ಕುಲಕರ್ಣಿ<br>ಮನೆ.ನಂ ೧೧-೪೨೧. ಸಮತಾ ಕಾಲೋನಿ ಗುಲಬರ್ಗಾ. | ಸದಸ್ಯರು |
| ೪೧ | ಶ್ರೀ ಕೆ.ಎಚ್.ಹರಿಕುಮಾರ<br>ನಿವೃತ್ ಪ್ರಾಂಶುಪಾಲರು<br>ಮನೆ.ನಂ.೨೮/೧೭, ೨ನೇ ಕ್ರಾಸ<br>ಎಂ.ಎಂ.ಟಿ.ಸಿ. ಕಾಲೋನಿ ಬಳ್ಳಾರಿ. | ಸದಸ್ಯರು | ೪೨ | ಶ್ರೀ ವಿಜಯಕುಮಾರ<br>ಮನೆ.ನಂ.೮-೭-೧೩<br>ನಿವಾಸ ಉದಗಿರ ರಸ್ತೆ ಬೀದರ. | ಸದಸ್ಯರು |
| ೪೩ | ಡಾ!! ಪರಸಪ್ಪ<br>ಮನೆ.ನಂ.ಸಿ-೧೪ ಓಪಿಡಿ ಕ್ವಾಟರ್ಸ<br>ವಿಮ್ಸ ಆವರಣ, ಬಳ್ಳಾರಿ. | ಸದಸ್ಯರು | ೪೪ | ಶ್ರೀಮತಿ ಶಕುಂತಲಾ ತಂಬಾಕೇ<br>ಮನೆ.ನಂ.೮-೬-೧೦೦/೩<br>ಜೆ.ಪಿ.ನಗರ,<br>ಬೀದರ. | |

**ಹಣಕಾಸು ಸಮಿತಿ**

| | | |
|---|---|---|
| ೧ | ಕುಲಪತಿಗಳು | ಅಧ್ಯಕ್ಷರು |
| ೨ | ಕಾರ್ಯದರ್ಶಿಗಳು, ಹಣಕಾಸು ವಿಭಾಗ ಕರ್ನಾಟಕ ಸರಕಾರ ಅಥವಾ ಅವರಿಂದ ನಾಮನಿರ್ದೇಶನಗೊಂಡ ಅಧಿಕಾರಿ | ಸದಸ್ಯರು |
| ೩ | ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಕರ್ನಾಟಕ ಸರಕಾರ ಅಥವಾ ಅವರಿಂದ ನಾಮನಿರ್ದೇಶನಗೊಂಡ ಅಧಿಕಾರಿ | ಸದಸ್ಯರು |
| ೪ | ಕಾರ್ಯದರ್ಶಿಗಳು, ಯೋಜನಾ ವಿಭಾಗ ಕರ್ನಾಟಕ ಸರಕಾರ ಅಥವಾ ಅವರಿಂದ ನಾಮನಿರ್ದೇಶನಗೊಂಡ ಅಧಿಕಾರಿ | ಸದಸ್ಯರು |
| ೫ | ಶ್ರೀ ಬಾಬುಲಾಲ ಜೈನ<br>ಸಿಂಡಿಕೇಟ ಸದಸ್ಯರು | ಸದಸ್ಯರು |
| ೬ | ಡಾ!! ಆರ್.ಬಿ.ಗದಗಿಮಠ<br>ವಿದ್ಯಾ ವಿಷಯಕ ಪರಿಷತ್ತಿನ ಸದಸ್ಯರು | ಸದಸ್ಯರು |
| ೭ | ಕುಲಸಚಿವರು | ಸದಸ್ಯರು |
| ೮ | ಕುಲಸಚಿವರು ( ಮೌಲ್ಯಮಾಪನ) | ಸದಸ್ಯರು |
| ೯ | ಹಣಕಾಸು ಅಧಿಕಾರಿಗಳು | ಸದಸ್ಯ ಸಂಚಾಲಕರು. |

**ಸಿಂಡಿಕೇಟ್**: (೧) ಸಿಂಡಿಕೇಟ ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರುತ್ತದೆ:

- ಕುಲಪತಿ;

- ಕಾಲೇಜು ಶಿಕ್ಷಣ ಕಮೀಷನರ್ ಅಥವಾ ಜಂಟಿ ನಿರ್ದೇಶಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವನ ನಾಮನಿರ್ದೇಶಿತ;
- ತಾಂತ್ರಿಕ ಶಿಕ್ಷಣ ನಿರ್ದೇಶಕ ಅಥವಾ ಜಂಟಿ ನಿರ್ದೇಶಕದ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವನ ನಾಮನಿರ್ದೇಶಿತ;
- ಜ್ಯೇಷ್ಠತೆಯ ಆಧಾರದ ಮೇಲೆ ಸರದಿಯ ಮೇಲೆ ಒಂದು ವರ್ಷದ ಅವಧಿಗಾಗಿ ಕುಲಪತಿಯವರಿಂದ ನಾಮ ನಿರ್ದೇಶಿತನಾದ ಒಬ್ಬ ಡೀನ್;
- ಖ್ಯಾತ ಶಿಕ್ಷಣ ತಜ್ಞರು; ವಾಣಿಜ್ಯ, ಬ್ಯಾಂಕಿಂಗ, ಕೈಗಾರಿಕೆ ಅಥವಾ ಇತರ ವೃತ್ತಿಗಳ ಪೈಕಿಯಿಂದ ಕುಲಾಧಿತಿಯವರು ನಾಮನಿರ್ದೇಶನ ಮಾಡಿದ ಇಬ್ಬರು ಸದಸ್ಯರು;
- ಜ್ಯೇಷ್ಠತೆಗನುಸಾರವಾಗಿ ಸರದಿಯ ಮೇಲೆ ಒಂದು ವರ್ಷದ ಅವಧಿಗಾಗಿ ಕುಲಪತಿಯವರಿಂದ ನಾಮನಿರ್ದೇಶಿತರಾದ ಸಂಯೋಜಿತ ಕಾಲೇಜುಗಳ ನಾಲ್ಕು ಪ್ರಾಂಶುಪಾಲರು, ಅವರಲ್ಲಿ ಒಬ್ಬರು ಮಹಿಳಾ ಪ್ರಾಂಶುಪಾಲರಾಗಿರುತ್ತಾರೆ;
- ರಾಜ್ಯ ಸರ್ಕಾರವು ನಿರ್ದೇಶನ ಮಾಡಿದ ಆರು ಜನ ಖ್ಯಾತ ಶಿಕ್ಷಣ ತಜ್ಞರು, ಅವರಲ್ಲಿ;
  ೧. ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬರು;
  ೨. ಇತರ ಹಿಂದುಳಿದ ವರ್ಗಗಳಿಗೆ ಸೆರಿದ ಒಬ್ಬರು;
  ೩. ಮಹಿಳೆಯರು ಒಬ್ಬರು;
  ೪. ಧಾರ್ಮಿಕ ಅಲ್ಪಸಂಖ್ಯಾತರಿಗೆ ಸೇರಿದ ಒಬ್ಬರು;
  ೫. ಇತರ ಇಬ್ಬರು; ಇರುತ್ತಾರೆ.

  ಪರಂತು, ಸಂಯೋಜಿತ ಕಾಲೇಜಿನಲ್ಲಿ ಅಥವಾ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಸಾಮರ್ಥ್ಯದಲ್ಲಿ ನಿಯೋಜನೆಯಲ್ಲಿರುವ ಯಾವೊಬ್ಬ ವ್ಯಕ್ತಿಯ ನಾಮನಿರ್ದೇಶನಕ್ಕೆ ಅರ್ಹನಾಗಿರುವದಿಲ್ಲ;
- ರಾಜ್ಯ ಸರ್ಕಾರದ ಅನುಮೋದನೆಯೊಂದಿಗೆ ಕುಲಪತಿಯು, ಜ್ಯೇಷ್ಠತೆಗನುಸಾರವಾಗಿ ಸರದಿಯ ಮೇಲೆ ಒಂದು ವರ್ಷದ ಅವಧಿಗೆ ನಾಮ ನಿರ್ದೇಶನ ಮಾಡಿದ ಸ್ನಾತಕೋತ್ತರ ಅಧ್ಯಯನಗಳ ಒಬ್ಬ ಪ್ರಾಧ್ಯಾಪಕ;
- ವೈದ್ಯಕೀಯ ಶಿಕ್ಷಣದ ಆಯುಕ್ತರು ಅಥವಾ ಜಂಟಿನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಅವರ ನಾಮ ನಿರ್ದೇಶಿತರು;
- ಸಾರ್ವಜನಿಕ ಶಿಕ್ಷಣದ ಆಯುಕ್ತರು ಅಥವಾ ಜಂಟಿನಿರ್ದೇಶಕರ ದರ್ಜೆಗೆ ಕಡಿಮೆಲ್ಲದ ಅವರ ನಿರ್ದೇಶಿತರು;
- ಪದವಿ ಪೂರ್ವ ಶಿಕ್ಷಣದ ನಿರ್ದೇಶಕರು ಅಥವಾ ಜಂಟಿ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಅವರ ನಾಮನಿರ್ದೇಶಿತರು;

**ಸಿಂಡಿಕೇಟ್ ಅಧಿಕಾರಗಳು:-**

(೧) ಸಿಂಡಿಕೇಟು ವಿಶ್ವವಿದ್ಯಾನಿಲಯದ ನಿಧಿಗಳ ಮತ್ತು ಸ್ವತ್ತುಗಳ ನಿರ್ವಹಣೆಯ ವಿಶ್ವವಿದ್ಯಾನಿಲಯದ ವ್ಯವಹಾರಗಳ ಆಡಳಿತದ ಅಧಿಕಾರವನ್ನು ಹೊಂದಿರುವದು.

(೨) ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಸಿಂಡಿಕೇಟು ಈ ಮುಂದಿನ ಅಧಿಕಾರಗಳನ್ನು ಹೊಂದಿರುವದು, ಎಂದರೆ;

- ವಿಶ್ವವಿದ್ಯಾನಿಲಯ ಹಣಕಾಸು ಮತ್ತು ಎಲ್ಲ ಇತರ ಆಡಳಿತಾತ್ಮಕ ವ್ಯವಹಾರಗಳನ್ನು ನಿರ್ವಹಿಸುವುದು ಮತ್ತು ನಿಯಂತ್ರಿಸುವುದು ಮತ್ತು ಆ ಉದ್ದೇಶಕ್ಕಾಗಿ ತಾನು ಅವಶ್ಯಕ ಹಾಗೂ ಸೂಕ್ತವೆಂದು ಭಾವಿಸಬಹುದಾದ ಅಂಥ ಏಜೆಂಟರನ್ನು ನೇಮಕ ಮಾಡುವುದು;
- ವಿಶ್ವವಿದ್ಯಾನಿಲಯದ ಪರವಾಗಿ ಕರಾರುಗಳನ್ನು ಮಾಡಿಕೊಳ್ಳುವುದ, ವ್ಯತ್ಯಸ್ತಗೊಳಿಸುವುದು, ಕಾರ್ಯಗತಗೊಳಿಸುವುದು ಮತ್ತು ರದ್ದುಗೊಳಿಸುವುದು;
- ೩೪ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಪರೀಕ್ಷಕರು ಮತ್ತು ಮಾಡರೇಟರುಗಳನ್ನು ನೇಮಕಮಾಡುವುದು ಮತ್ತು ಅವಶ್ಯವೆನಿಸಿದರೆ ಅವರನ್ನು ಬದಲಾಯಿಸುವುದು ಅಥವಾ ತೆಗೆದು ಹಾಕುವುದು ಹಾಗೂ ಅವರ ಫೀಜುಗಳು, ಉಪಲಬ್ಧಿಗಳು ಮತ್ತು ಪ್ರವಾಸ ಮತ್ತು ಇತರ ಭತ್ಯಗಳನ್ನು ನಿಗದಿಪಡಿಸುವುದು;
- ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳ ಮೂಲಕ ನಿಯಮಿಸಲಾದ ರೀತಿಯಲ್ಲಿ ಪರೀಕ್ಷೆಗಳನ್ನು ನಡೆಸುವುದಕ್ಕಾಗಿ ವ್ಯವಸ್ಥೆಗಳನ್ನು ಮಾಡುವುದು;
- ವಿಶ್ವವಿದ್ಯಾನಿಲಯದ ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಸ್ವೀಕರಿಸುವುದು, ಅರ್ಜಿಸುವುದು. ಧಾರಣ ಮಾಡುವುದು, ನಿಯಂತ್ರಿಸುವುದು ಮತ್ತು ಆಡಳಿತ ನಡೆಸುವುಮ ಮತ್ತು ವಿಶ್ವವಿದ್ಯಾನಿಲಯದ ನಿಧಿಗಳನ್ನು ಸೂಕ್ತ ಯೋಜನೆಗಳಲ್ಲಿ ವಿವೇಕಯುತವಾಗಿ ತೊಡಗಿಸುವುದು;
- ವಿಶ್ವವಿದ್ಯಾನಿಲಯದ ನಿಧಿಗಳು ಮತ್ತು ಸ್ವತ್ತುಗಳಿಗೆ ಸಂಬಂಧಿಸಿದ ಸರಿಯಾದ ಲೆಕ್ಕಪತ್ರಗಳನ್ನು ಇಡುವಂತೆ ಮಾಡುವುದು;
- ಈ ಮುಂದಿನವುಗಳಿಗಾಗಿ ಫೀಜುಗಳನ್ನು ವಿಧಿಸುವುದು ಮತ್ತು ವಸೂಲಿ ಮಾಡುವುದು;

೧. ಪಾಠ ಮತ್ತು ಸಂಶೋಧನೆ;
೨. ಪರೀಕ್ಷೆಗಳು ಮತ್ತು ಘಟಿಕೋತ್ಸವಗಳಿಗೆ ಪ್ರವೇಶ;
೩. ವಿಶ್ವವಿದ್ಯಾನಿಲಯವು ಕೈಗೊಳ್ಳಬಹುದಾದಂತೆ ಅಂಥ ಇತರ ಸೇವೆಗಳು;
೪. ಕಾಲೇಜುಗಳ ಸಂಶೋಧನೆ ಮತ್ತು ಪರಿವೀಕ್ಷಣೆ;
೫. ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ಇತರ ಉದ್ದೇಶಗಳು;

- ವಿಶ್ವವಿದ್ಯಾನಿಲಯದ ಹಣಕಾಸು ಅಂದಾಜುಗಳನ್ನು ತಯಾರಿಸುವುದು ಮತ್ತು ಅದನ್ನು ವಿದ್ಯಾವಿಷಯಕ ಪರಿಷತ್ತಿಗೆ ಒಪ್ಪಿಸುವುದು;
- ವಿಶ್ವವಿದ್ಯಾನಿಲಯವು ಸ್ಥಾಪಿಸಿದ ಅಥವಾ ನಿರ್ವಹಿಸುತ್ತಿರುವ ಕಾಲೇಜುಗಳು, ವಿದ್ಯಾರ್ಥಿನಿಲಯಗಳು, ಗ್ರಂಥಾಲಯಗಳು ಪ್ರಯೋಗ ಶಾಲೆಗಳು ಮತ್ತು ಸಂಗ್ರಹಾಲಯಗಳು ಮತ್ತು ಇತರ ಸಂಸ್ಥೆಗಳ ಆಡಳಿತ ಮತ್ತು ನಿಯಂತ್ರಣ ಕೈಗೊಳ್ಳುವುದು.
- ಕಾಲೇಜುಗಳ ಸಂಯೋಜನೆಯ ಸಂಬಂಧದಲ್ಲಿ ಪ್ರವೇಶ ನೀಡುವುದಕ್ಕಾಗಿ ಶಿಫಾರಸ್ಸುಗಳನ್ನು ಮಾಡುವುದು;
- ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಇಲ್ಲದಿರುವ ವಿದ್ಯಾರ್ಥಿನಿಲಯಗಳನ್ನು ಮನ್ನಣೆ ನೀಡುವುದು ಮತ್ತು ಅಂಥ ಮನ್ನಣೆಯನ್ನು ಅಮಾನತ್ತುಗೊಳಿಸುವುದು ಅಥವಾ ಹಿಂತೆಗೆದುಕೊಳ್ಳುವುದು;
- ಕ್ಯಾಂಪಸ್ ಮತ್ತು ಅದರ ಅನೆಕ್ಸ್‌ಗಳೊಳಗೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ನಿವಾಸ ಮತ್ತು ಶಿಸ್ತಿನ ಮೇಲ್ವಿಚಾರಣೆ ಮತ್ತು ನಿಯಂತ್ರಣ ಹಾಗೂ ಅವರ ಆರೋಗ್ಯ ಮತ್ತು ಯೋಗಕ್ಷೇಮವನ್ನು ವೃದ್ಧಿಗೊಳಿಸಲು ವ್ಯವಸ್ಥೆ ಮಾಡುವುದು;
- ಉದ್ಯೋಗ ವಿಭಾಗ (ಬ್ಯೂರೋ) ಮತ್ತು ವಾರ್ತಾ ವಿಭಾಗವನ್ನು ರಚಿಸುವುದು, ಮತ್ತು ಅವುಗಳ ಕಾರ್ಯನಿರ್ವಹಣೆಯ ನಿಯಂತ್ರಣ ಮಾಡುವುದು;
- ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಂಥ ತನ್ನ ಪ್ರಕಾರ್ಯಗಳನ್ನು ಕುಲಪತಿಗೆ ಪ್ರತಿಯೋಜಿಸುವುದು; ;
- ವಿಶ್ವವಿದ್ಯಾನಿಲಯಕ್ಕಾಗಿ ಸಾಮಾನ್ಯ ಮುದ್ರೆಯನ್ನು ಆಯ್ಕೆ ಮಾಡುವುದು ಮತ್ತು ಅದರ ಅಭಿರಕ್ಷೆ ಮತ್ತು ಉಪಯೋಗಕ್ಕಾಗಿ ಉಪಬಂಧಿಸುವುದು;
- ವಿಶ್ವವಿದ್ಯಾನಿಲಯದಿಂದ ಅಥವಾ ಅದರ ವಿರುದ್ಧ ಕಾನೂನು ವ್ಯವಹರಣೆ ನಡೆಸಲು ವ್ಯವಸ್ಥೆ ಮಾಡುವುದು;
- ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ವಿಶ್ವವಿದ್ಯಾನಿಲಯವು ಅಗತ್ಯ ಪಡಿಸಿದ ಪ್ರಾಧ್ಯಾಪಕರ, ಉಪನ್ಯಾಸಕರ ಅಥವಾ ಶಿಕ್ಷಕರ ಯಾವುವೇ ಇತರ ಹುದ್ದೆಗಳನ್ನು ಸ್ಥಾಪಿಸುವುದು;
- ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಫೆಲೋಶಿಪ್‌ಗಳು, ಸಂಚಾರಿ ಫೆಲೋಶಿಪಗಳು, ವಿದ್ಯಾರ್ಥಿ ವೇತನಗಳು, ಶಿಷ್ಯವೇತನಗಳು, ಪ್ರವೇತನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ಸ್ಥಾಪಿಸುವುದು;
- ವಿದ್ಯಾವಿಷಯಕ ಪರಿಷತ್ತಿನ ಸಿಫಾರಸಿನ ಮೇಲೆ ಗೌರವ ಪದವಿಗಳು, ಬಿರುದುಗಳು ಅಥವಾ ಇತರೆ ವಿದ್ಯಾವಿಷಯಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;
- ಪರಿನಿಯಮಗಳನ್ನು ರಚಿಸುವುದು, ಅವುಗಳ ತಿದ್ದುಪಡಿ ಮಡುವುದು ಮತ್ತು ನಿರಸನಗೊಳಿಸುವುದು;
- ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಪ್ರೊಫೆಸ್‌ರ ಇಮೆರಿಟಿಸ್ (ವಿಶ್ರಾಂತ ಮಹೋಪಾದ್ಯಾಯ) ಬಿರುದನ್ನು ಪ್ರದಾನ ಮಾಡುವುದು;
- ಹುದ್ದೆಗಳ ಸೃಜನೆಗಾಗಿ ಪರಿನಿಯಮಗಳನ್ನು ಮಾಡುವುದು;
- ಈ ಅಧಿನಿಯಮ, ಪರಿನಿಯಮಗಳು, ಆರ್ಡಿನೆನ್ಸ್‌ಗಳು, ಅಥವಾ ವಿನಿಯಮಗಳು ಮೂಲಕ ತನಗೆ ಪ್ರದಾನ ಮಾಡಬಹುದಾದ ಅಥವಾ ವಿಧಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಇತರ ಕರ್ತವ್ಯಗಳನ್ನು ನಿರ್ವಹಿಸುವುದು.

(೩) (೨)ನೇ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ನೌಕರರ ವೇತನ ಶ್ರೇಣಿಗಳನ್ನು ಪರಿಷ್ಕರಿಸುವ ಅಥವಾ ಅವರಿಗೆ ಯಾವುದೇ ಭತ್ಯೆಗಳನ್ನು ಅಥವಾ ಉಪಲಬ್ಧಿಗಳನ್ನು ನೀಡುವ ಅಧಿಕಾರವನ್ನು ಸಿಂಡಕೇಟಿಗೆ ಪ್ರದಾನ ಮಾಡಿರುವದಿಲ್ಲ.

**ವಿದ್ಯಾವಿಷಯಕ ಪರಿಷತ್ತು:**

(೧) ವಿದ್ಯಾವಿಷಯಕ ಪರಿಷತ್ತು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರುತ್ತದೆ:

- ಕುಲಪತಿ
- ಕಾಲೇಜು ಶಿಕ್ಷಣ ಕಮಿಷನರ ಅಥವಾ ಜಂಟಿ ನಿರ್ದೇಶಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವರ ನಾಮ ನಿರ್ದೇಶಿತರು;
- ತಾಂತ್ರಿಕ ಶಿಕ್ಷಣದ ನಿರ್ದೇಶಕರು ಅಥವಾ ಜಂಟಿ ನಿರ್ದೇಶಕನ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅವರ ನಾಮ ನಿರ್ದೇಶಿತರು;
- ವಿಶ್ವವಿದ್ಯಾನಿಲಯದ ಪ್ರದೇಶ ವ್ಯಾಪ್ತಿಯೊಳಗೆ ಬರುವ ಪ್ರತಿಯೊಂದು ಜಿಲ್ಲೆಗೆ ಸಂಬಂಧಪಟ್ಟಂತೆ ಕರ್ನಾಟಕ ವಿಧಾನ ಸಭೇಯ ಸಭಾಧ್ಯಕ್ಷರು ನಾಮನಿರ್ದೇಶನ ಮಾಡಿದ ಒಬ್ಬ ಕರ್ನಾಟಕ ವಿಧಾನ ಸಭಾ ಸದಸ್ಯ;
- ಕರ್ನಾಟಕ ವಿಧಾನಪರಿಷತ್ತಿನ ಸಭಾಪತಿಯವರು ನಾಮನಿರ್ದೇಶನ ಮಾಡಿದ ಇಬ್ಬರು ಕರ್ನಾಟಕ ವಿಧಾನ ಪರಿಷತ್ ಸದಸ್ಯರು;
- ಎರಡು ವರ್ಷಗಳ ಅವಧಿಗಾಗಿ, ಜ್ಯೇಷ್ಠತೆಗ ಅನುಸಾರವಾಗಿ ಸರದಿಯ ಮೇಲೆ, ಕುಲಪತಿಯವರಿಂದ ನಾಮನಿರ್ದೇಶಿತರಾದ ಸಂಯೋಜಿತ ಕಾಲೇಜುಗಳ ಹತ್ತು ಜನ ಪ್ರಾಂಶುಪಾಲರು;
- ಮೂರು ವರ್ಷಗಳನ್ನು ಮೀರದ ಅವಧಿಗಾಗಿ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ, ಕೈಗಾರಿಕೆ, ವಾಣಿಜ್ಯ, ಬ್ಯಾಂಕಿಂಗ್ ಅಥವಾ ಇತರ ಯಾವುದೇ ವೃತ್ತಿಯನ್ನು (ವಿಶ್ವವಿದ್ಯಾನಿಲಯದ ಅಧಿಕಾರ ವ್ಯಾಪ್ತಿಯೊಳಗೆ ಬರುವ ) ಪ್ರತಿನಿಧಿಸುವ ಮೂವರು ಸುಪ್ರಸಿದ್ಧ ವ್ಯಕ್ತಿಗಳು;
- ಕುಲಪತಿಯವರು, ಜ್ಯೇಷ್ಠತೆಗನುಸಾರವಾಗಿ, ಸರದಿಯ ಮೆಲೆ ಎರಡು ವರ್ಷಗಳ ಅವಧಿಗಾಗಿ ನಾಮನಿರ್ದೇಶನ ಮಾಡಿದ ವಿಶ್ವವಿದ್ಯಾನಿಲಯದ ವಿಭಾಗದ ಐವರು ಪ್ರಾಧ್ಯಾಪಕರು;
- ಕುಲಪತಿಯವರು, ಜ್ಯೇಷ್ಠತೆಗನುಸಾರವಾಗಿ, ಸರದಿಯ ಮೇಲೆ ಎರಡು ವರ್ಷಗಳ ಅವಧಿಗಾಗಿ ನಾಮನಿರ್ದೇಶನ ಮಾಡಿದ ವಿಶ್ವವಿದ್ಯಾನಿಲಯದ ವಿಭಾಗದ ಐವರು ಡೀನರುಗಳು;
- ಎರಡು ವರ್ಷಗಳ ಅವಧಿಗಾಗಿ ಕುಲಪತಿಯವರಿಂದ ನಾಮನಿರ್ದೇಶನ ಮಾಡಲಾಗುವ ಆರು ವಿದ್ಯಾರ್ಥಿಗಳು, ಅವರ ಪೈಕಿ, ಪದವಿ ವ್ಯಾಸಂಗದ ಒಬ್ಬ ವಿದ್ಯಾರ್ಥಿ, ಸ್ನಾತಕೋತ್ತರ ಪದವಿಯ ಒಬ್ಬ ವಿದ್ಯಾರ್ಥಿ, ವೃತ್ತಿಪರ ವ್ಯಾಸಂಗದ ಒಬ್ಬ ವಿದ್ಯಾರ್ಥಿ, ನ್ಯಾಷನಲ್ ಕೆಡೆಟ್ ಕೋರ್ಸ್ಸಿನ ಒಬ್ಬ ಅಭ್ಯರ್ಥಿ, ನ್ಯಾಷನಲ್ ಸೋಷಿಯಲ್ ಸರ್ವಿಸ್ ಒಬ್ಬ ಅಭ್ಯರ್ಥಿ, ಅರ್ಹತೆಯ ಆಧಾರದ ಮೇಲೆ ಒಬ್ಬ ಕ್ರೀಡಾಪಟು, ಮತ್ತು ಅವರಲ್ಲಿ ಕನಿಷ್ಠ ಪಕ್ಷ ಒಬ್ಬ ಮಹಿಳೆ ಒಬ್ಬ ಸಂಶೋಧನಾ ವಿದ್ಯಾರ್ಥಿ ಇರತಕ್ಕದ್ದು, ಪರಂತು, ಯಾವೊಬ್ಬ ವಿದ್ಯಾರ್ಥಿಯು;-
    - ವಿಶ್ವವಿದ್ಯಾನಿಲಯದ ಅಥವಾ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜಿನ ಹಾಜರಿಪಟ್ಟಿಯಲ್ಲಿ ಅವನ ಹೆಸರು ಕಂಡು ಬರದಿದ್ದ ಹೊರತು.
    - ಒಂದು ಪದವಿ ಅಥವಾ ಸ್ನಾತಕೋತ್ತರ ಪದವಿ ಅಥವಾ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಡಿಪ್ಲೋಮಾಕ್ಕೆ ಅವಕಾಶ ಕೊಡುವ ವಿಶ್ವವಿದ್ಯಾಲಯದಲ್ಲಿ ಅಥವಾ ಸಂಜೆ ಕಾಲೇಜಿನಲ್ಲಿ ಅಥವಾ ಬಾಹ್ಯ ಅಭ್ಯರ್ಥಿಯಾಗಿ ಅಥವಾ ಅಂಚೆ ತೆರಪಿನ ಶಿಕ್ಷಣದ ಮೂಲಕ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಿದ್ದರೆ,
    - ಅವನು ಅರು ವರ್ಷಗಳಲ್ಲಿ ವ್ಯಾಸಂಗ ಕ್ರಮವನ್ನು ಪೂರ್ಣಗೊಳಿಸಲು ತಪ್ಪಿದರೆ,

  - ಅವನು ನಾಮ ನಿರ್ದೇಶನಕ್ಕೆ ಅರ್ಹನಾಗಿರುವದಿಲ್ಲ.

- ಮೂರು ವರ್ಷಗಳ ಅವಧಿಗಾಗಿ, ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಆರು ಜನ ಸುಪ್ರಸಿದ್ಧ ಶಿಕ್ಷಣ ತಜ್ಞರು, ಅವರ ಪೈಕಿ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬರು, ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಒಬ್ಬರು, ಮಹಿಳೆಯರನ್ನು ಪ್ರತಿನಿಧಿಸುವ ಒಬ್ಬರು, ಧಾರ್ಮಿಕ ಅಲ್ಪಸಂಖ್ಯಾತರನ್ನು ಪ್ರತಿನಿಧಿಸುವ ಒಬ್ಬರು ಮತ್ತು ಇತರರನ್ನು ಪ್ರತಿನಿಧಿಸುವ ಇಬ್ಬರು;
- ಗ್ರಂಥಪಾಲಕರು;
- ವಿದ್ಯಾರ್ಥಿ ಕಲ್ಯಾಣ ನಿರ್ದೇಶಕರು;
- ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯ ನಿರ್ದೇಶಕರು;
- ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರು;

- ಶಾರೀರಿಕ ಶಿಕ್ಷಣದ ನಿರ್ದೇಶಕರು;
- ಕುಲಸಚಿವರು (ಮೌಲ್ಯಮಾಪನ)
- ಕುಲಸಚಿವರು, ಸದಸ್ಯ ಕಾರ್ಯದರ್ಶಿ;

ಪರಂತು, ಸಂಯೋಜಿತ ಕಾಲೇಜಿನಲ್ಲಿ ಅಥವಾ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಸಾಮರ್ಥ್ಯದಲ್ಲಿ ನಿಯೋಜಿತನಾದ ಯಾವೊಬ್ಬ ವ್ಯಕ್ತಿಯು ನಾಮನಿರ್ದೇಶಿತನಾಗಲು ಅರ್ಹನಾಗತಕ್ಕದ್ದಲ್ಲ.

(೨) ವಿದ್ಯಾವಿಷಯಕ ಪರಿಷತ್ತು. ಶೈಕ್ಷಣಿಕ ವರ್ಷದಲ್ಲಿ ಕನಿಷ್ಟ ನಾಲ್ಕು ಬಾರಿಯಾದರೂ ಸಭೆ ಸೇರುವದು ಆದಾಗ್ಯೂ, ಎರಡು ನಿರಂತರ ಸಭೆಗಳ ನಡುವಿನ ಅವಧಿಯು ಮೂರು ತಿಂಗಳುಗಳನ್ನು ಮೀರುವದಿಲ್ಲ.

**ವಿದ್ಯಾವಿಷಯಕ ಪರಿಷತ್ತಿನ ಅಧಿಕಾರಗಳು:**

(೧) ವಿದ್ಯಾವಿಷಯಕ ಪರಿಷತ್ತು, ವಿಶ್ವವಿದ್ಯಾನಿಲಯದ ವಿದ್ಯಾವಿಷಯದ ನಿಕಾಯವಾಗಿರುತ್ತದೆ. ಮತ್ತು ಈ ಅಧಿನಿಯಮದ, ಪರಿನಿಯಮಗಳ, ಆರ್ಡಿನೆನ್ಸಗಳ, ವಿನಿಯಮಗಳ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾನಿಲಯದ ಶಿಕ್ಷಣ, ವಿದ್ಯಾಭ್ಯಾಸ ಮತ್ತು ಪರೀಕ್ಷೆಗಳ ನಿಯಂತ್ರಣ ಹಾಗೂ ಸಾಮಾನ್ಯ ವಿನಿಯಮವನ್ನು ಹೊಂದಿರುತ್ತದೆ ಮತ್ತು ಅವುಗಳ ಗುಣಮಟ್ಟಗಳನ್ನು ಕಾಪಾಡುವ ಜವಾಬ್ದಾರಿ ಹೊಂದಿರುತ್ತದೆ .

(೨) ಹಿಂದೆ ಹೇಳಿದವುಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಹಾಗು ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ವಿದ್ಯಾವಿಷಯಕ ಪರಿಷತ್ತು ಈ ಮುಂದಿನ ಅಧಿಕಾರಗಳನ್ನು ಚಲಾಯಿಸುತ್ತದೆ, ಎಂದರೆ:

- ವಿದ್ಯಾವಿಷಯಕ ವಿಷಯಗಳಿಗೆ ಸಂಬಂಧಿಸಿದಂತೆ ಅರ್ಡಿನೆನ್ಸ್‌ಗಳನ್ನು ಹೊರಡಿಸಲು ಪ್ರಸ್ತಾವನೆಗಳನ್ನು ಮಾಡುವುದು;
- ಆರ್ಡಿನೆನ್ಸ್‌ನಲ್ಲಿ ಒಳಗೊಂಡಿರದಷ್ಟರಮಟ್ಟಿಗೆ ಅಧ್ಯಯನ ಕ್ರಮಗಳಿಗೆ ಸಂಬಂಧಿಸಿದಂತೆ ವಿನಿಯಮಗಳನ್ನು ರಚಿಸುವುದು;
- ಪರೀಕ್ಷೆಗಳ ಸ್ಕೀಂಗಳಿಗೆ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಪರೀಕ್ಷೆಗಳು, ಪದವಿಗಳು, ಡಿಪ್ಲೊಮಾಗಳು, ಪ್ರಮಾಣ ಪತ್ರಗಳು ಅಥವಾ ಇತರ ವಿದ್ಯಾವಿಷಯಕ ಪ್ರಶಸ್ತಿಗಳಿಗೆ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡತಕ್ಕದ್ದೋ, ಅಂಥ ಷರತ್ತುಗಳಿಗೆ ಸಂಬಂಧಿಸಿದಂತೆ ವಿನಿಯಮಗಳನ್ನು ರಚಿಸುವುದು;
- ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳ ಫಲಿತಾಂಶಗಳನ್ನು ಘೋಷಿಸುವುದಕ್ಕಾಗಿ ವಿನಿಯಮಗಳನ್ನು ರಚಿಸುವುದು;
- ಕಾಲೇಜುಗಳಲ್ಲಿ ಮತ್ತು ಮನ್ನಣೆ ಪಡೆದ ಸಂಸ್ಥೆ ಗಳಲ್ಲಿ, ಅಧ್ಯಯನ ಹಾಗೂ ಬೋಧನೆಯ ಸಮನ್ವಯತೆಗಾಗಿ ವ್ಯವಸ್ಥೆ ಮಾಡುವುದು;
- ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆಯನ್ನು ವೃದ್ಧಿಪಡಿಸುವುದಕ್ಕಾಗಿ ಅಥವಾ ಇತರ ವಿಶೇಷ ಅಧ್ಯಯನಗಳನ್ನು ವೃದ್ಧಿಪಡಿಸುವುದಕ್ಕಾಗಿ ಸ್ಕೀಂಗಳನ್ನು ರೂಪಿಸುವುದು.
- ವ್ಯಾಸಂಗ ವಿಭಾಗಗಳಿಗೆ ವಿಷಯಗಳನ್ನು ಹಂಚಿಕೆ ಮಾಡಲು ಮತ್ತು ವ್ಯಾಸಂಗ ವಿಭಾಗಗಳಿಗೆ ತನ್ನದೇ ಆದ ಸದಸ್ಯರುಗಳನ್ನು ನೇಮಿಸುವುದಕ್ಕೆ ಪ್ರಸ್ತಾವನೆಗಳನ್ನು ಮಾಡುವುದು;
- ಪರೀಕ್ಷೆಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಸಂಬಂಧಪಟ್ಟಂತೆ ವಿನಾಯತಿಗಳ ನೀಡಿಕೆಗಾಗಿ ಮಾನದಂಡಗಳನ್ನು ನಿಗದಿಪಡಿಸುವುದು;
- ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಪ್ರಾಧ್ಯಾಪಕರುಗಳ, ರೀಡರುಗಳ, ಉಪನ್ಯಾಸಕರ ಮತ್ತು ಇತರ ಅಧ್ಯಾಪಕರ ಹುದ್ದೆಗಳನ್ನು ಸ್ಥಾಪನೆ ಮಾಡುವುದಕ್ಕಾಗಿ ಮತ್ತು ಅಂಥ ಹುದ್ದೆಗಳ ಕರ್ತವ್ಯಗಳನ್ನು ನಿಯಮಿಸುವುದಕ್ಕಾಗಿ ಪ್ರಸ್ತಾವನೆಗಳನ್ನು ಮಾಡುವುದು;
- ಫೆಲೋಷಿಪಗಳು, ಸಂಚಾರಿ ಫೆಲೋಷಿಪಗಳು, ವಿದ್ಯಾರ್ಥಿ ವೇತನ, ಶಿಷ್ಯವೇತನ, ಪ್ರವೇತನಗಳನ್ನು ಸ್ಥಾಪಿಸಿಸುವುದಕ್ಕಾಗಿ ಮತ್ತು ಅವುಗಳನ್ನು ನೀಡುವುದಕ್ಕಾಗಿ ಪ್ರಸ್ತಾವನೆಗಳನ್ನು ಮಾಡುವುದು;
- ಪರೀಕ್ಷೆಗಳ ಸಮಾನತೆಯನ್ನು ನಿಯಮಿಸಲು ವಿನಿಯಮಗಳನ್ನು ರಚಿಸುವುದು;

- ಪದವಿಗಳು, ಡಿಪ್ಲೊಮಾಗಳು ಮತ್ತು ಇತರ ವಿದ್ಯಾವಿಷಯಕ ಪ್ರಶಸ್ತಿಗಳಿಗೆ ಅರ್ಹತೆ ಪಡೆಯುವುದಕ್ಕೆ ಅನುಮೋದಿತ ಅಧ್ಯಯನ ಕ್ರಮಗಳಿಂದ ವಿನಾಯತಿಗಳನ್ನು ನೀಡುವುದಕ್ಕಾಗಿ ವಿನಿಯಮಗಳನ್ನು ರಚಿಸುವುದು;
- ಸಂಶೋಧನೆ ಮತ್ತು ಕಲಿಕೆಯ ಪ್ರಗತಿಗಾಗಿ ಮತ್ತು ಪ್ರಸಾರಕ್ಕಾಗಿ ಸೂಕ್ತವೆಂದು ಭಾವಿಸಬಹುದಾದಂಥ ಕಲಿಕೆ ಮತ್ತು ಅಧ್ಯಯನ ಕ್ರಮಗಳ ಅಂಥ ವಿಭಾಗಳಲ್ಲಿ ಶಿಕ್ಷಣ, ಬೋಧನೆ ಮತ್ತು ತರಬೇತಿಗಾಗಿ ಅವಕಾಶ ಕಲ್ಪಿಸುವುದು;
- ವಿಶೇಷ ಅಧ್ಯಯನಗಳನ್ನು ಕೈಗೊಳ್ಳುವುದಕ್ಕೆ , ಸಂಯೋಜನೆಗೊಂಡ ಕಾಲೇಜುಗಳು ಮತ್ತು ಮನ್ನಣೆ ಪಡೆದ ಸಂಸ್ಥೆಗಳನ್ನು ಸಮರ್ಥಗೊಳಿಸುವಂತೆ ಮಾಡಲು ಅಂಥ ಉಪಬಂಧಗಳನ್ನು ರಚಿಸುವುದು;
- ವಾರ್ಷಿಕ ಹಣಕಾಸು ಅಂದಾಜುಗಳನ್ನು ಪರಿಗಣಿಸುವದು;
- ಯಾವುದೇ ವಿನಿಯಮವನ್ನು ತಿದ್ದುಪಡಿ ಮಾಡುವುದು ಅಥವಾ ನಿರಸನಗೊಳಿಸುವುದು;
- ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳಿಗೆ ಸದಸ್ಯರುಗಳನ್ನು ನಾಮನಿರ್ದೇಶಿಸುವುದು;
- ಈ ಅಧಿನಿಯಮ, ಅಥವಾ ಅದರ ಅಡಿಯಲ್ಲಿ ರಚಿಸಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳಿಂದ ಅದಕ್ಕೆ ಪ್ರದಾನ ಮಾಡಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅದರ ಮೇಲೆ ವಿಧಿಸಬಹುದಾದಂಥ ಇತರ ಕರ್ತವ್ಯಗಳನ್ನು ನೆರವೇರಿಸುವುದು;
- ಸಂಶೊಧನಾ ಮತ್ತು ವಿಶೇಷ ಅಧ್ಯಯನಗಳ ವಿಭಾಗಗಳನನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು; ಮತ್ತು
- ಸಾಮಾನ್ಯವಾಗಿ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ಸಲಹೆ ನೀಡುವುದು.

**ಹಣಕಾಸು ಸಮಿತಿ:**

(೧) ಹಣಕಾಸು ಸಮಿತಿಯು ಈ ಕೆಳಕಂಡ ಸದಸ್ಯರನ್ನೊಳಗೊಂಡಿರುತ್ತದೆ:

- ಕುಲಪತಿ;
- ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ; ಅಥವಾ ಉಪಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅವನ ನಾಮನಿರ್ದೇಶಿತ;
- ಉನ್ನತ ಶಿಕ್ಷಣದ ಪ್ರಭಾರದಲ್ಲಿರುವ ಸಕಾರದ ಕಾರ್ಯದರ್ಶಿ ಅಥವಾ ಉಪಕಾರ್ಯದರ್ಶಿಯ ದರ್ಜೆಗಿಂತ ಕಡೆಮೆಯಿಲ್ಲದ ದರ್ಜೆಯ ಅವನ ನಾಮನಿರ್ದೇಶಿತ;
- ಯೋಜನಾ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಉಪಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅವರ ನಾಮನಿರ್ದೇಶಿತ;
- ಸಿಂಡಕೇಟನಿಂದ ನಾಮನಿರ್ದೇಶಿತನಾದ ಒಬ್ಬ ಸದಸ್ಯ;
- ಕುಲಸಚಿವರು;
- ಕುಲಸಚಿವರು (ಮೌಲ್ಯಮಾಪನ)
- ಹಣಕಾಸು ಅಧಿಕಾರಿ, ಸದಸ್ಯ ಕಾರ್ಯದರ್ಶಿ;

(೨) ಹಣಕಾಸು ಸಮಿತಿಯು ಕನಿಷ್ಠ ಮೂರು ತಿಂಗಳಿಗೆ ಒಂದು ಬಾರಿಯಾದರು ಸಭೆ ಸೇರತಕ್ಕದ್ದು;

(೩) ಹಣಕಾಸು ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸುತ್ತದೆ, ಎಂದರೆ: -

- ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳ ಸಾಮಾನ್ಯ ಪರಿಶೀಲನೆಗಳನ್ನು ನಡೆಸುವುದು, ವಾರ್ಷಿಕ ಲೆಕ್ಕ ಪರಿಶೋಧನೆಯ ವರದಿಗಳನ್ನು ಪುನರಾವಲೋಕಿಸುವುದು ಮತ್ತು ಅದರ ಮೇಲೆ ತನ್ನ ಶಿಫಾರಸುಗಳನ್ನು ಮಾಡುವುದು;
- ವಾರ್ಷಿಕ ಬಜೆಟ್ ಅಂದಾಜುಗಳನ್ನು ಪರಿಶೀಲಿಸುವುದು ಮತ್ತು ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟಗೆ ಅದರ ಶಿಫಾರಸ್ಸುಗಳನ್ನು ಮಾಡುವುದು;
- ಬಜೆಟ್ಟಿನಲ್ಲಿ ಒದಗಿಸಿಲ್ಲದ ವೆಚ್ಚವನ್ನು ಒಳಗೊಂಡ ಅಥವಾ ವಿಶ್ವವಿದ್ಯಾನಿಲಯದಲ್ಲಿ ಹುದ್ದೆಗಳ ಸೃಜನೆ, ಮೇಲ್ದರ್ಜೆ ಗೇರಿಸುವುದು ಮತ್ತು ರದ್ಧಿಯಾತಿಯು ಒಳಗೊಂಡಂತೆ ಬಜೆಟ್ಟಿನಲ್ಲಿ ಒದಗಿಸಿದ ಮೊಬಲಗಿಂತ ಹೆಚ್ಚುವರಿ ವೆಚ್ಚವನ್ನು ಒಳಗೊಂಡ ವಿಶ್ವವಿದ್ಯಾನಿಲಯದ ಎಲ್ಲ ಪ್ರಸ್ತಾವಗಳನ್ನು ಪರಿಶೀಲಿಸುವುದು;

- ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳು.

(೪) (೩)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕುಲಪತಿಯು, ತುರ್ತು ಸಂದರ್ಭಗಳಲ್ಲಿ ಮತ್ತು ಲಿಖಿತದಲ್ಲಿ ಕಾರಣಗಳನ್ನು ದಾಖಲ್ಮಾಡಿ, ಹಣಕಾಸು ಸಮಿತಿಯ ಒಪ್ಪಿಗೆ ಇಲ್ಲದೆ, ಬಜೆಟ್ಟಿನಲ್ಲಿ ಹಣ ಒದಗಿಸಿಲ್ಲದ ಅಥವಾ ಬಜೆಟ್ಟನಲ್ಲಿ ಒದಗಿಸಿದ ಹಣಕ್ಕಿಂತ ಹೆಚ್ಚುವರಿಯಾದ ಯಾವುದೇ ಒಂದು ಸಂದರ್ಭದಲ್ಲಿ, ಐವತ್ತು ಸಾವಿರ ರೂಪಯಿಗಳಿಗೆ ಮೀರದ ಯಾವುದೇ ವೆಚ್ಚವನ್ನು ವಹಿಸಬಹುದು;

ಪರಂತು, ಅಂಥ ವೆಚ್ಚವನ್ನು ಸ್ಥಿರೀಕರಣಕ್ಕಾಗಿ ಹಣಕಾಸು ಸಮಿತಿಯು, ಮುಂದಿನ ನಿಕಟ ತರುವಾಯದ ತ್ರೈಮಾಸಿಕ ಸಭೆಯಲ್ಲಿ ಮಂಡಿಸಲಾಗುವದು;

ಮತ್ತು ಪರಂತು, ಕುಲಪತಿಯವರ ಮೂಲಕ ವೆಚ್ಚದ ಭರಿಸುವಿಕೆಯು ತೃಪ್ತಿಕರವಾಗಿಲ್ಲದಿದ್ದಲ್ಲಿ, ಹಣಕಾಸು ಸಮಿತಿಯು ಅದನ್ನು ಕುಲಾಧಿಪತಿಯವರಿಗೆ ಉಲ್ಲೇಖಿಸುವದು. ಈ ವಿಷಯದಲ್ಲಿ ಅವರ ತೀರ್ಮಾನವೇ ಅಂತಿಮವಾಗಿರುತ್ತದೆ.

(೫) ಹಣಕಾಸು ಸಮಿತಿಯು ಪರಿಗಣಿಸಿದ, ಯಾವುದೇ ವಿಷಯದ ಸಂದರ್ಭದಲ್ಲಿ ಮತಗಳು ಸಮಾನವಾಗಿ ವಿಭಾಗವಾಗಿರುವಲ್ಲಿ ಕುಲಪತಿಯವರು ನಿರ್ಣಾಯಕ ಮತವನ್ನು ಹೊಂದಿರುತ್ತಾರೆ.

**ಅಧ್ಯಯನ ಮಂಡಳಿ:**

(೧) ಆರ್ಡಿನೆನ್ಸ್‌ಗಳ ಮೂಲಕ ನಿಯಮಿಸಬಹುದಾದಂತೆ ಪ್ರತಿಯೊಂದು ವಿಷಯಕ್ಕೆ ಅಥವಾ ವಿಷಯಗಳ ಸಮೂಹಕ್ಕೆ ಒಂದು ಅಧ್ಯಯನ ಮಂಡಳಿ ಇರುತ್ತದೆ.

ಪರಂತು, ಸಿಂಡಿಕೇಟ್, ಪದವಿಪೂರ್ವ ಅಧ್ಯಯನಗಳಿಗಾಗಿ ಮತ್ತು ಸ್ನಾತಕೋತ್ತರ ಅಧ್ಯಯನಗಳಿಗಾಗಿ ಪ್ರತ್ಯೇಕ ಅಧ್ಯಯನ ಮಂಡಳಿಯನ್ನು ರಚಿಸಬಹುದಾಗಿದೆ.

(೨) (೧) ನೇ ಉಪ ಪರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಅಧ್ಯಯನ ಮಂಡಳಿಯ ರಚನೆ, ಪ್ರಕಾರ್ಯಗಳು ಮತ್ತು ಅದಿಕಾರಗಳು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

**ವ್ಯಾಸಂಗ ವಿಭಾಗಗಳು:**

(೧) ವಿಶ್ವವಿದ್ಯಾನಿಲಯವು ಕಲೆ, ವಾಣಿಜ್ಯ, ಶಿಕ್ಷಣ, ಇಂಜಿನಿಯರಿಂಗ್, ಕಾನೂನು, ವಿಜ್ಞಾನ ಮತ್ತು ಕಾಲಕಾಲಕ್ಕೆ ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ಇತರ ವ್ಯಾಸಂಗ ವಿಭಾಗಗಳನ್ನು ಹೊಂದಿರತಕ್ಕದ್ದು.

(೨) ಪ್ರತಿಯೊಂದು ವ್ಯಾಸಂಗ ವಿಭಾಗವು ಆರ್ಡಿನೆನ್ಸ್ನ ಮೂಲಕ ಅದಕ್ಕೆ ವಹಿಸಿಕೊಡಬಹುದಾದ ಅಂಥ ಸಂಖ್ಯೆಯ ಅಧ್ಯಯನ ವಿಭಾಗಗಳನ್ನು ಒಳಗೊಂಡಿರುತ್ತದೆ.

(೩) ಪ್ರತಿಯೊಂದು ವ್ಯಾಸಂಗ ವಿಭಾಗದಲ್ಲಿಯ ಅಧ್ಯಯನ ವಿಭಾಗವು, ಈ ಮುಂದಿನ ಸದಸ್ಯರನ್ನೂ ಒಳಗೊಂಡಿರತಕ್ಕದ್ದು, ಎಂದರೆ:

- ವ್ಯಾಸಂಗ ವಿಭಾಗದ ಡೀನ್;
- ಕುಲಸಚಿವರು (ಮೌಲ್ಯಮಾಪನ)
- ವಿಭಾಗದ ಅಧ್ಯಾಪಕರು;
- ವಿಭಾಗಕ್ಕೆ ಸಂಬಂಧಪಟ್ಟ ಗೌರವ ಪ್ರಾಧ್ಯಾಪಕರು,
- ವಿಭಾಗದಲ್ಲಿ ಸಂಶೋಧನೆಗಳನ್ನು ನಡೆಸಲು ನೇಮಿಸಲಾದ ವ್ಯಕ್ತಿಗಳು;
- ಆರ್ಡಿನೆನ್ಸ್ ಮೂಲಕ ನಿಯಮಿಸಬಹುದಾದಂತೆ ವಿಭಾಗದ ಸದಸ್ಯರಾಗಿರುವ ಅಂಥ ಇತರ ವ್ಯಕ್ತಿಗಳು;

(೪) ಯಾವುದೇ ಅಧ್ಯಯನ ವಿಭಾಗವನ್ನು ಪರಿನಿಯಮಗಳ ಮೂಲಕ ಸ್ಥಾಪಿಸಬಹುದು ಅಥವಾ ರದ್ದುಗೊಳಿಸಬಹುದು.

(೬) ಪ್ರತಿಯೊಂದು ಅಧ್ಯಯನ ವಿಭಾಗವು ಈ ಮುಂದಿನವರನ್ನು ಒಳಗೊಂಡ ಒಂದು ವಿಭಾಗೀಯ ಪರಿಷತ್ತು ಹೊಂದಿರುತ್ತದೆ:

- ಎಲ್ಲಾ ಪ್ರಾಧ್ಯಾಪಕರು ಮತ್ತು ರೀಡರುಗಳು;
- ಕುಲಸಚಿವರು (ಮೌಲ್ಯಮಾಪನ);
- ವಿಭಾಗದಲ್ಲಿನ ಇಬ್ಬರು ಅತ್ಯಂತ ಹಿರಿಯ ಉಪನ್ಯಾಸಕರು;

(೭) ಅಧ್ಯಕ್ಷನು, ಸಿಂಡಿಕೇಟಿನ ಮೂಲಕ ಎರಡು ವರ್ಷಗಳ ಅವಧಿಗಾಗಿ ಅಥವಾ ಕಾಲಕಾಲಕ್ಕೆ ಸಿಂಡಿಕೇಟು ನಿರ್ಧರಿಸಬಹುದಾದಂತೆ ಅಂಥ ಇತರ ಅವಧಿಗಾಗಿ ನೇಮಕವಾಗಿರುತ್ತಾನೆ;

(೮) ಅಧ್ಯಕ್ಷನು, ವಿಭಾಗದ ಆಡಳಿತದ ಪ್ರಭಾರವನ್ನು ವಹಿಸುತ್ತಾನೆ. ವಿಭಾಗದ ಪರಿಷತ್ತಿನ ಮತ್ತು ಅಧ್ಯಕ್ಷನ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳು, ಪರಿನಿಯಮಗಳ ಮೂಲಕ ನಿಯಮಿಸಿದಂತೆ ಇರುತ್ತದೆ.

(೯) ಪ್ರತಿಯೊಂದು ವ್ಯಾಸಂಗ ವಿಭಾಗವು ಈ ಮುಂದಿನ ಸದಸ್ಯರನ್ನು ಒಳಗೊಂಡಿರುತ್ತವೆ,

- ವ್ಯಾಸಂಗ ವಿಭಾಗದ ಡೀನ್;
- ಕುಲಸಚಿವರ (ಮೌಲ್ಯಮಾಪನ)
- ವ್ಯಾಸಂಗ ವಿಭಾಗದಲ್ಲಿನ ಅಧ್ಯಯನ ವಿಭಾಗಗಳ ಅಧ್ಯಕ್ಷರು;
- ಎಲ್ಲಾ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರ ಗೈರು ಹಾಜರಿಯಲ್ಲಿ ಪ್ರತಿಯೊಂದು ವ್ಯಾಸಂಗ ವಿಭಾಗದಿಂದ ವ್ಯಾಸಂಗ ವಿಭಾಗದಲ್ಲಿನ ರೀಡರುಗಳು;
- ಕುಲಪತಿಯು ಎರಡು ವರ್ಷಗಳ ಅವಧಿಗಾಗಿ ಸೇವಾ ಜ್ಯೇಷ್ಠತೆಗೆ ಅನುಸಾರವಾಗಿ ಸರದಿಯ ಮೇಲೆ ಪ್ರತಿಯೊಂದು ಅಧ್ಯಯನ ವಿಭಾಗದಿಂದ ನಾಮನಿರ್ದೇಶನ ಮಾಡಿದ ಒಬ್ಬ ರೀಡರು ಮತ್ತು ಒಬ್ಬ ಉಪನ್ಯಾಸಕ;
- ಎರಡು ವರ್ಷಗಳ ಅವಧಿಗಾಗಿ, ಕುಲಪತಿಯು ನಾಮನಿರ್ದೇಶನ ಮಾಡಿದ ರಾಜ್ಯದಲ್ಲಿನ ಇತರ ವಿಶ್ವವಿದ್ಯಾನಿಲಯಗಳ ಕಾಲೇಜಿನ ಐವರು ಅಧ್ಯಾಪಕರು ಮತ್ತು ಇಬ್ಬರು ತಜ್ಞರು;
- ಪರಿನಿಯಮಗಳ ಮೂಲಕ ಗೊತ್ತುಪಡಿಸಬಹುದಾದಂತೆ ಅಂಥ ಇತರ ವ್ಯಕ್ತಿಗಳು;

(೧೦) ವ್ಯಾಸಂಗ ವಿಭಾಗಗಳು, ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಂಥ ಅಧಿಕಾರಗಳನನು ಚಲಾಯಿಸತಕ್ಕದ್ದು ಮತ್ತು ಅಂತಹ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

**ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ:**

(೧) ಶೈಕ್ಷಣಿಕ ವ್ಯಾಸಂಗ ಕ್ರಮಗಳ, ಸಂಶೋಧನಾ ಕಾರ್ಯಕ್ರಮಗಳ, ಆಂತರಿಕ ಶಿಸ್ತು ಕಾರ್ಯ ಚಟುವಟಿಕೆಗಳ, ತರಬೇತಿ, ವಿಸ್ತರಣೆ ಮತ್ತು ಸಂಶೋಧನೆಗಾಗಿ ಬಾಹ್ಯ ಏಜೆನ್ಸಿಗಳೊಂದಿಗೆ ಸಂವಾದ ಚಟುವಟಿಕೆ ನಡೆಸುವುದಕ್ಕಾಗಿ ಮತ್ತು ಅದರಿಂದ ರೂಪಿಸಲಾದ ಕಾರ್ಯಕ್ರಮಗಳು ಮತ್ತು ಕಾರ್ಯಚಟುವಟಿಕೆಗಳನ್ನು ಕಾಲಕಾಲಕ್ಕೆ ಜಾರಿಗೊಳಿಸುವುದರ ಮೇಲ್ವಿಚಾರಣೆ ಮಾಡುವುದಕ್ಕಾಗಿ ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ ಇರುತ್ತದೆ.

(೨) ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಲ್ಲಿ ಈ ಕೆಳಕಂಡ ಸದಸ್ಯರು ಇರುತ್ತಾರೆ:

- ಕುಲಪತಿಯವರು ಅಧ್ಯಕ್ಷರಾಗಿರುತ್ತಾರೆ;
- ಕುಲಸಚಿವರು;
- ಕುಲಸಚಿವರು (ಮೌಲ್ಯಮಾಪನ);

- ಸರದಿಯ ಮೇಲೆ, ಒಂದು ವರ್ಷದ ಅವಧಿಗೆ ಕುಲಪತಿಯವರ ಶಿಫಾರಸ್ಸಿನಂತೆ ವ್ಯಾಸಂಗ ವಿಭಾಗದ ಇಬ್ಬರು ಅತ್ಯಂತ ಹಿರಿಯ ಡೀನಗಳು;
- ಎರಡು ವರ್ಷಗಳ ಅವಧಿಗಾಗಿ, ಕುಲಪತಿಯವರಿಂದ ನಾಮ ನಿರ್ದೇಶಿತರಾದ ಇಬ್ಬರು ಅತ್ಯಂತ ಹಿರಿಯ ಪ್ರಾಧ್ಯಾಪಕರು, ಅವರಲ್ಲಿ ಒಬ್ಬರು ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಇನ್ನೊಬ್ಬರು ಮಾನವಿಕ ಮತ್ತು ಸಾಮಾಜಿಕ ವಿಜ್ಞಾನಗಳ ಪ್ರಾಧ್ಯಾಪಕರಾಗಿರುತ್ತಾರೆ;

- ಎರಡು ವರ್ಷಗಳ ಅವಧಿಗಾಗಿ ರಾಜ್ಯಸರ್ಕಾರದಿಂದ ನಾಮನಿರ್ದೇಶಿತರಾದ ಒಬ್ಬರು ಶಿಕ್ಷಣ ತಜ್ಞರು, ಅವರು ಬೋಧನೆ ಮತ್ತು ಸಂಶೋಧನೆಯಲ್ಲಿ ಮತ್ತು ಶೈಕ್ಷಣಿಕ ಆಡಳಿತದಲ್ಲಿ ಅಪಾರ ಅನುಭವ ಹೊಂದಿದವರಾಗಿರುತ್ತಾರೆ;
- ರಾಜ್ಯಸರ್ಕಾರದಿಂದ ನಾಮನಿರ್ದೇಶಿತನಾದ ಯೋಜನಾ ಇಲಾಖೆಯ ಸರ್ಕಾರದ ಉಪಕಾರ್ಯದರ್ಶಿಯವರ ಅಥವಾ ಯೋಜನಾ ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ರಾಜ್ಯಸರ್ಕಾರದ ಒಬ್ಬ ಅಧಿಕಾರಿ;
- ಎರಡು ವರ್ಷಗಳ ಅವಧಿಗಾಗಿ ರಾಜ್ಯಸರ್ಕಾರದಿಂದ ನಾಮ ನಿರ್ದೇಶಿತರಾದ, ಸಾಮಾನ್ಯವಾಗಿ ವಿಶ್ವವಿದ್ಯಾನಿಲಯದ ಪ್ರದೇಶದೊಳಗೆ ವಾಸಿಸುತ್ತಿರುವ, ಕೈಗಾರಿಕೆ ಮತ್ತು ವ್ಯಾಪಾರ ಕ್ಷೇತ್ರದಿಂದ, ಇಬ್ಬರು ಪ್ರತಿನಿಧಿಗಳು.
- ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯು, ಕನಿಷ್ಠ ಪಕ್ಷ ಮೂರು ತಿಂಗಳಿಗೊಮ್ಮೆಯಾದರೂ ಸಭೆ ಸೇರುತ್ತದೆ. ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯ ಪ್ರತಿಯೊಂದು ಠರಾವನ್ನು ಪರಿಗಣನೆಗಾಗಿ ಮತ್ತು ಅವುಗಳ ಬಗ್ಗೆ ಕ್ರಮ ಕೈಗೊಳ್ಳುವುದಕ್ಕಾಗಿ ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟಿನ ಮುಂದೆ ಇಡಲಾಗುವದು.

**ಪರೀಕ್ಷಕರ ನೇಮಕಾತಿ ಮಂಡಳಿ:**

(೧) ಪ್ರತಿಯೊಂದು ವ್ಯಾಸಂಗ ವಿಭಾಗಕ್ಕೆ, ಪ್ರತಿವರ್ಷಕ್ಕಾಗಿ ಪರೀಕ್ಷಕರ ಪಟ್ಟಿಯನ್ನು ತಯಾರಿಸುವ ಉದ್ದೇಶಕ್ಕಾಗಿ, ಪರೀಕ್ಷಕರ ನೇಮಕಾತಿ ಮಂಡಳಿಯನ್ನು ರಚಿಸಲಾಗಿರುತ್ತದೆ.

(೨) ಅಂಥ ಪ್ರತಿಯೊಂದು ಪರೀಕ್ಷಕರ ನೇಮಕಾತಿ ಮಂಡಳಿಯು, ಈ ಮುಂದಿನ ಸದಸ್ಯರನ್ನು ಒಳಗೊಂಡಿರುತ್ತದೆ. ಎಂದರೆ:-

- ಕುಲಪತಿಯವರು : ಅಧ್ಯಕ್ಷರು;
- ಕುಲಸವಚಿರು (ಮೌಲ್ಯಮಾಪನ);
- ಸಂಬಂಧಪಟ್ಟ ವ್ಯಾಸಂಗ ವಿಭಾಗದ ಡೀನ್;
- ನಿರ್ದಿಷ್ಟ ವಿಷಯದಲ್ಲಿನ ಅಧ್ಯಯನ ಮಂಡಳಿಯ ಅಧ್ಯಕ್ಷ;
- ಕುಲಪತಿಯವರು ನಾಮನಿರ್ದೇಶನ ಮಾಡಿದ, ವ್ಯಾಸಂಗ ವಿಭಾಗದಲ್ಲಿನ ಸಂಬಂಧಪಟ್ಟ ಅಧ್ಯಯನ ವಿಭಾಗದಲ್ಲಿರುವ ಪದವಿಪೂರ್ವ ವಿಷಯಗಳನ್ನು ಬೋಧಿಸುವ ಇಬ್ಬರು ಅಧ್ಯಾಪಕರು;
- ಕುಲಪತಿಯವರು ನಾಮನಿರ್ದೇಶನ ಮಾಡಿದ ವ್ಯಾಸಂಗ ವಿಭಾಗದಲ್ಲಿನ ಸಂಬಂಧಪಟ್ಟ ಅಧ್ಯಯನ ವಿಭಾಗದಲ್ಲಿರುವ ಸ್ನಾತಕೋತ್ತರ ಪದವಿಯ ವಿಷಯಗಳನ್ನು ಬೋಧಿಸುವ ಇಬ್ಬರು ಅಧ್ಯಾಪಕರು.

(೩) ಪರೀಕ್ಷಕರ ನೇಮಕಾತಿ ಮಂಡಳಿಯು, ಅಧ್ಯಯನ ಮಂಡಳಿಯು ತಯಾರಿಸಬೇಕಾದ ಪಟ್ಟಿಗಳಲ್ಲಿ ಒಳಗೊಂಡ ವ್ಯಕ್ತಿಗಳ ಪೈಕಿಯಿಂದ ಪರೀಕ್ಷಕರ ಪಟ್ಟಿಗಳನ್ನು ಸಿದ್ದಪಡಿಸುತ್ತದೆ ಮತ್ತು ಅದನ್ನು ಸಿಂಡಿಕೇಟಿನ ಅನುಮೋದನೆಗೆ ಒಪ್ಪಿಸುತ್ತದೆ.

(೪) ಯಾವ ಕಾರಣದ ಮೇಲೆ ಬದಲಾವಣೆಯನ್ನು ಸೂಚಿಸಲಾಗಿದೆಯೋ ಅಥವಾ ಮಾಡುಲಾಗಿದೆಯೋ, ಆ ನಿರ್ದಿಷ್ಟ ಕಾರಣವನ್ನು ನಿರೂಪಿಸುವ ನಿರ್ಣಯವನ್ನು ಅಂಗೀಕರಿಸಿದ ಹೊರತು, ಸಿಂಡಿಕೇಟು ಆ ಪಟ್ಟಿಯಲ್ಲಿ ಯಾವುದೇ ಅಂಥ ಬದಲಾವಣೆಯನ್ನು ಸೂಚಿಸುವುದಿಲ್ಲ ಅಥವಾ ಮಾಡುವುದಿಲ್ಲ.

(೫) ಸಿಂಡಿಕೇಟಿನಿಂದ ನೇಮಕಗೊಂಡ ಯಾವೊಬ್ಬ ಪರೀಕ್ಷಕನು, ಯಾವುದೇ ಕಾರಣಕ್ಕಾಗಿ, ಪರೀಕ್ಷಕನ ಕೆಲಸವನ್ನು ಅಂಗೀಕರಿಸಲು ಅಸಮರ್ಥನಾದಲ್ಲಿ ಮತ್ತು ಸಿಂಡಿಕೇಟು ಸಕಾಲದಲ್ಲಿ ಹೊಸ ನೇಮಕಾತಿಯನ್ನು ಮಾಡಲಾಗದಿದ್ದಲ್ಲಿ, ಕುಲಪತಿಗಳು ಬೇರೊಬ್ಬ ಪರೀಕ್ಷಕನನ್ನು ನೇಮಕ ಮಾಡುತ್ತಾರೆ ಮತ್ತು ಅಂತಹ ನೇಮಕಾತಿಯನ್ನು ಸಿಂಡಿಕೇಟಿಗೆ ವರದಿ ಮಾಡಲಾಗುವದು,

(೬) ಹಾಜರಿದ್ದ ಮೂರನೇ ಎರಡರಷ್ಟು ಸದಸ್ಯರು ಸಿಂಡಿಕೇಟಿನ ನಿರ್ಣಯವನ್ನು ಅಂಗೀಕರಿಸಿದ ಹೊರತು; ಮಂಡಳಿಯ ಯಾವೊಬ್ಬ ಸದಸ್ಯನ್ನು ಪರೀಕ್ಷಕನನ್ನಾಗಿ ನೇಮಕ ಮಾಡುವದಿಲ್ಲ.

**ಇತರೆ ಮಂಡಳಿಗಳು:**

(೧) ವಿಶ್ವವಿದ್ಯಾನಿಲಯವು, ಕಾಲಕಾಲಕ್ಕೆ ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಂಥ ಇತರ ಮಂಡಳಿಗಳನ್ನು ಸ್ಥಾಪಿಸಲಾಗುತ್ತದೆ.

(೧) ನೇ ಉಪಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ಮಂಡಳಿಗಳ ರಚನೆ, ಪ್ರಕಾರ್ಯಗಳು, ಅಧಿಕಾರಗಳು ಮತ್ತು ಕರ್ತವ್ಯಗಳು
ಪರಿನಿಯಮಗಳ ಮೂಲಕ ನಿಯಮಿಸಲಾದಂತೆ ಇರುತ್ತವೆ.